# ಮಣಿಪಾಲ ಎಂಬ ಮಿನಿ ಜಗತ್ತು



ವಿದೇಶೀ ವಿದ್ಯಾರ್ಥಿಗಳ ಪಾಲಿಗೆ ಮಹಾರಾಷ್ಟ್ರದ ಪುಣೆ ಹಾಗೂ ಕರ್ನಾಟಕದ ಮಣಿಪಾಲ ಅತ್ಯಂತ ಪ್ರೀತಿಯ ತಾಣಗಳಾಗಿವೆ. 53 ದೇಶಗಳ ವಿದ್ಯಾರ್ಥಿಗಳನ್ನು ಹೊಂದಿರುವುದು ಮಣಿಪಾಲ ವಿಶ್ವವಿದ್ಯಾಲಯದ ಹೆಗ್ಗಳಿಕೆಯಾಗಿದೆ. ಹಚ್ಚಹಸಿರಿನ 600 ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಮಣಿಪಾಲ ವಿಶ್ವವಿದ್ಯಾಲಯದಲ್ಲಿ ದೇಶ– ವಿದೇಶಗಳ 20,000ಕ್ಕೂ ಅಧಿಕ ವಿದ್ಯಾರ್ಥಿಗಳು ಅಧ್ಯಯನ ನಡೆಸಿದ್ದಾರೆ. ತೊನ್ಸೆ ಮಾಧವ ಅನಂತ ಪೈ ಅವರ ಪರಿಶ್ರಮದ ಫಲವಾಗಿ ಮಣಿಪಾಲ ಸಾಗರೋತ್ತರ ವಿದ್ಯಾರ್ಥಿಗಳ ಕಣ್ಣು ಕುಕ್ಕಿಸುವ ಸ್ಥಳವಾಗಿ ಬೆಳೆದಿದೆ.

ಕಸ್ತೂರಬಾ ವೈದ್ಯಕೀಯ ಕಾಲೇಜು 1953ರಲ್ಲಿ ಆರಂಭವಾದಾಗಲೇ ಇಬ್ಬರು ವಿದೇಶೀ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು! 60ರ ದಶಕದಲ್ಲಿ ಮಲೇಷ್ಯಾದಿಂದ ಪ್ರತಿವರ್ಷವೂ ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಸಾಲುಗಟ್ಟಿ ನಿಲ್ಲುತ್ತಿದ್ದರು. ಒಂದು ದಶಕದ ತರುವಾಯ ಪೂರ್ವ ಆಫ್ರಿಕಾ, ಉತ್ತರ ಅಮೆರಿಕ ಮತ್ತು ಏಷ್ಯಾದ ಇತರ ಭಾಗಗಳಿಂದ ವೈದ್ಯಕೀಯ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳು ಬರಲು ಆರಂಭಿಸಿದರು. ಈ ವಿದೇಶೀ ಗುರು– ಶಿಷ್ಯ ಪರಂಪರೆಯ ಮುಂದುವರಿದ ಭಾಗವಾಗಿಯೇ ಇಲ್ಲಿನ ಹಳೆಯ ವಿದ್ಯಾರ್ಥಿಗಳು ಈಗ ತಮ್ಮ ಮಕ್ಕಳನ್ನೂ ಓದಲು ಇಲ್ಲಿಗೆ ಕಳುಹಿಸುತ್ತಾರೆ. ಸದ್ಯ 3000ಕ್ಕೂ ಅಧಿಕ ಸಾಗರೋತ್ತರ ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ನಡೆಸಿದ್ದಾರೆ. ಅದರಲ್ಲಿ ಸಾವಿರ ವಿದ್ಯಾರ್ಥಿಗಳಷ್ಟು ಅನಿವಾಸಿ ಭಾರತೀಯರೂ ಸೇರಿದ್ದಾರೆ.

ಅಮೆರಿಕ, ಕೆನಡಾ, ಕೀನ್ಯಾ, ಉಗಾಂಡ, ಝೂಂಬಿಯಾ, ಓಮನ್, ಕತಾರ್, ಬಹ್ರೇನ್, ಸೌದಿ ಅರೇಬಿಯಾ, ಮಲೇಷ್ಯಾ, ಶ್ರೀಲಂಕಾ ಸೇರಿದಂತೆ ಹಲವು ದೇಶಗಳ ವಿದ್ಯಾರ್ಥಿಗಳು ಇಲ್ಲಿಗೆ ದಾಂಗುಡಿ ಇಟ್ಟಿದ್ದಾರೆ.

ವಿನಿಮಯ ಕಾರ್ಯಕ್ರಮದ ಅಡಿಯಲ್ಲೂ 150 ವಿದ್ಯಾರ್ಥಿಗಳು ಇಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಮಣಿಪಾಲ ವಿಶ್ವವಿದ್ಯಾಲಯದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಸೇರಿದಂತೆ ಸುಮಾರು 300 ಕೋರ್ಸ್‌ಗಳು ಅಧ್ಯಯನಕ್ಕೆ ಲಭ್ಯವಿವೆ. ಅದರ ಪ್ರತಿಶತ 15ರಷ್ಟು ಸೀಟುಗಳು ವಿದೇಶೀ ವಿದ್ಯಾರ್ಥಿಗಳಿಗೆ ಮೀಸಲಾಗಿವೆ.

ವಿದೇಶೀ ವಿನಿಮಯಕ್ಕೆ ದೊಡ್ಡ ಪ್ರಮಾಣದ ಕೊಡುಗೆ ನೀಡುತ್ತಿರುವ ಮಣಿಪಾಲ, ಮಹಾನಗರವೇನಲ್ಲ. ಹಾಗಿದ್ದೂ ಸಾಗರೋತ್ತರ ವಿದ್ಯಾರ್ಥಿಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಮಲೇಷ್ಯಾ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದು, ಮೇಲಿಂದ ಮೇಲೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ವಿವಿಧ ದೇಶಗಳ ರಾಷ್ಟ್ರೀಯ ದಿನಾಚರಣೆಗಳೂ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ನಡೆಯುತ್ತವೆ.

ನಮ್ಮ ಮೇಲೆ ಹಲ್ಲೆ ಮಾಡಿದ. ನನಗೀಗ ಓಡಾಡಲೂ ಭಯ' ಎಂದು ಆತಂಕದಿಂದ ಹೇಳುತ್ತಾನೆ. ಐವರಿ ಕೋಸ್ಟ್‌ನಿಂದ ಬಂದ ಹುಡುಗಿ ಗ್ಯ್ರಾಲಿ ಬರೋನ್, 'ನನ್ನ ಸ್ಥಳೀಯ ಸಹಪಾಠಿಗಳೇ ನನಗೆ ಮಿತಿ ಇಲ್ಲದಂತೆ ಕಿರುಕುಳ ನೀಡುತ್ತಿದ್ದಾರೆ. ನಾನು ತವರಿಗೆ ವಾಪಸಾಗುವ ಬಗೆಗೆ ಯೋಚಿಸುತ್ತಿದ್ದೇನೆ' ಎಂದು ಹೇಳುತ್ತಾಳೆ. 'ನಾನು ಅವರ ಮೂದಲಿಕೆಯನ್ನು ಸಾಕಷ್ಟು ತಡೆದುಕೊಂಡಿದ್ದೇನೆ. ಆದರೆ, ಸಹನೆ ಮೀರುತ್ತಿದೆ. ಏಕಾಂತದಲ್ಲಿ ಕುಳಿತು ಅಳುವುದೇ ಕೆಲಸವಾಗಿದೆ' ಎಂದು ನೋವು ತೋಡಿಕೊಳ್ಳುತ್ತಾಳೆ!

'ಕಾಲೇಜು ಮತ್ತು ಸುತ್ತಲಿನ ವಾತಾವರಣದಲ್ಲಿ ವಿದೇಶೀ ವಿದ್ಯಾರ್ಥಿಗಳ ಮೇಲಿನ ದೈಹಿಕ ಹಲ್ಲೆ ಮತ್ತು ಮಾನಸಿಕ ಕಿರುಕುಳ ಪ್ರಕರಣಗಳು ಬೆಳಕಿಗೆ ಬರುವುದೇ ಇಲ್ಲ. ಪ್ರತಿಯೊಂದೂ ಕಾಲೇಜು ವಿದೇಶೀ ವಿದ್ಯಾರ್ಥಿಗಳ ನೆರವಿಗಾಗಿ ಘಟಕವೊಂದನ್ನು ತೆರೆಯಬೇಕು' ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಸಲಹೆ ನೀಡುತ್ತಾರೆ. ಕಾಲೇಜಿನ ಹೊರಗೂ ಹಲ್ಲೆ ಪ್ರಕರಣಗಳು ನಡೆದ ವರದಿಯಾಗಿದೆ. ನಕಲಿ ಕಾಲೇಜುಗಳ ಹೆಸರಿನಲ್ಲೂ ಹಲವಾರು ವಿದೇಶೀ ವಿದ್ಯಾರ್ಥಿಗಳಿಗೆ ಮೋಸ ಮಾಡಿರುವ ಪ್ರಕರಣಗಳಿವೆ.

ಅಂಗಡಿಗಳಲ್ಲಿ ಸ್ಥಳೀಯರಿಗೆ ವಿಧಿಸುವ ದರಕ್ಕಿಂತ ದುಪ್ಪಟ್ಟು ಬೆಲೆಯನ್ನು ವಿದೇಶೀ ವಿದ್ಯಾರ್ಥಿಗಳಿಂದ ಪಡೆಯಲಾಗುತ್ತಿದೆ ಎಂಬ ದೂರುಗಳು ಈ ಎಲ್ಲ ನಗರಗಳಲ್ಲೂ ಸಾಮಾನ್ಯವಾಗಿವೆ. ಕೆಲವೊಮ್ಮೆ ವಾಸಕ್ಕೆ ಮನೆ ಹುಡುಕುವುದು ಸಹ ಸಾಗರೋತ್ತರ ವಿದ್ಯಾರ್ಥಿಗಳ ಪಾಲಿಗೆ ಕಷ್ಟವಾಗುತ್ತಿದೆ. ವಿದೇಶೀ ವಿದ್ಯಾರ್ಥಿನಿಯರಿಗೆ ಕೀಟಲೆ ಮಾಡಿದ ಪ್ರಕರಣಗಳೂ ಆಗಾಗ್ಗೆ ವರದಿಯಾಗುತ್ತಿವೆ.

ಇದೆಲ್ಲದರ ಹೊರತಾಗಿಯೂ ವಿದೇಶೀ ವಿದ್ಯಾರ್ಥಿಗಳ ಪಾಲಿಗೆ ಕರ್ನಾಟಕ ಅಚ್ಚುಮೆಚ್ಚಿನ ತಾಣವಾಗಿದೆ. ಅಮೆರಿಕ ಮತ್ತು ಯೂರೋಪಿನ ಹಲವು ವಿಶ್ವವಿದ್ಯಾನಿಲಯಗಳಿಗೆ ಪೈಪೋಟಿ ಕೊಡುವ ನಿಟ್ಟಿನಲ್ಲಿ ನಮ್ಮ ವಿಶ್ವವಿದ್ಯಾನಿಲಯಗಳು ಮುನ್ನುಗ್ಗುತ್ತಿವೆ. ಹಾಗಾಗಿಯೇ ವಿದೇಶೀಯರ ಮೋಹವೂ ಇತ್ತ ಹೆಚ್ಚಾಗಿದೆ.

**(ಚಿತ್ರಗಳು: ಸತೀಶ್ ಬಡಿಗೇರ, ಹೇಮನಾಥ್ ಪಡುಬಿದ್ರಿ, ಗೋವಿಂದರಾಜ್ ಜವಳಿ, ಮಂಜುನಾಥ್ ಎಂ.ಎಸ್. ಮತ್ತು ಐಸಿಸಿಆರ್ ಸಂಗ್ರಹ)**